
# ಪಂಡರಾಪುರದ ಇತಿಹಾಸ

**ಕಥೆ : ಮೋಹನಾ ಸೂರ್ಯನಾರಾಯಣ** **ಚಿತ್ರ: ಶಂಕರ್**

1 ಮಹಾರಾಷ್ಟ್ರದಲ್ಲಿ ಪುಂಡಲೀಕನೆಂಬುವನೊಬ್ಬನಿದ್ದ. ಅವನು ತನ್ನ ಪತ್ನಿಯ ಮಾತು ಕೇಳಿ ತನ್ನ ಹೆತ್ತವರನ್ನು ತುಂಬಾ ಕಠಿಣವಾಗಿ ನಡೆಸಿಕೊಳ್ಳುತ್ತಿದ್ದ. ಒಂದು ಬಾರಿ ಪುಂಡಲೀಕನು ತನ್ನ ಕುಟುಂಬದೊಂದಿಗೆ ವಾರಣಾಸಿಗೆ ಯಾತ್ರೆ ಹೊರಟ.

2





3




4 ಸ್ವಲ್ಪ ಹೊತ್ತಿನ ನಂತರ ಮೂರು ಮಂದಿ ದಿವ್ಯ ಸ್ತ್ರೀಯರು ಕಾಣಿಸಿಕೊಂಡರು. ಅವನು ಅವರಿಗೆ ನಮಸ್ಕರಿಸಿದ.






ಪುಂಡಲೀಕನು ತನ್ನ ಹೆತ್ತವರ ಕಾಲಿಗೆ ಬಿದ್ದು, ಬಹಳ ದೀರ್ಘಕಾಲ ಅತ್ತು ಪ್ರಾರ್ಥಿಸಿದ; ಅವರ ಕ್ಷಮೆ ಕೋರಿದ. ಅವರು ಕೂಡ ಅವನನ್ನು ಕ್ಷಮಿಸಿದರು.

7 ಪುಂಡಲೀಕನು ಚಂದ್ರಭಾಗಾ ನದಿಯ ತೀರದಲ್ಲಿ ಒಂದು ಆಶ್ರಮವನ್ನು ಕಟ್ಟಿದ. ಅಲ್ಲಿಗೆ ಅವನು ತನ್ನ ಹೆತ್ತವರನ್ನು ಕರೆತಂದು, ಅವರನ್ನು ಪ್ರೀತಿಯಿಂದ ಸೇವೆ ಮಾಡತೊಡಗಿದ. ಅವನ ಪತ್ನಿಗೂ ತನ್ನ ತಪ್ಪಿನ ಅರಿವಾಯಿತು.

8 ಪುಂಡಲೀಕನು ತನ್ನ ಹೆತ್ತವರ ಸೇವೆ ಮಾಡುತ್ತಿದ್ದ ವಿಷಯವನ್ನು ಕೇಳಿದ ಶ್ರೀಕೃಷ್ಣನು ತನ್ನ ಪತ್ನಿ ರುಕ್ಮಿಣಿಯೊಂದಿಗೆ ಅಲ್ಲಿಗೆ ಬಂದ.




ಆದರೆ ಕೃಷ್ಣ ಅಲ್ಲಿ ಕುಳಿತುಕೊಳ್ಳಲಿಲ್ಲ, ಅಲ್ಲೇ ತನ್ನ ಸೊಂಟದ ಮೇಲೆ ಕೈಯಿಟ್ಟುಕೊಂಡು ನಿಂತ.

**9**


ಆ ಕಲ್ಲಿಗೂ ಒಂದು ಕಥೆಯಿತ್ತು. ಶುಕ್ರನ ಮಗನಾದ ತ್ವಷ್ಟೃವು ಇಂದ್ರಪದವಿಯನ್ನು ಬಯಸಿ, ಅವನನ್ನು ಕೊಲ್ಲಬೇಕೆಂದು ವೃತ್ರಾಸುರನ ಸಹಾಯ ಕೇಳಿದ. ಅವನು ದರ್ಪದಿಂದ ಹೇಳಿದ...




ವೃತ್ರಾಸುರ ಹಾಗೆ ಮಾಡಿದ ಇಂದ್ರನನ್ನು ನುಂಗಿಬಿಟ್ಟ.

**10**

ಮುಂದೆ ದೇವತೆಗಳು ವೃತ್ರನ ಮೇಲೆ ಜೃಂಬೀಕವೆಂಬ ಅಸ್ತ್ರವನ್ನು ಪ್ರಯೋಗಿಸಿದರು. ಅದರ ಹೊಡೆತಕ್ಕೆ ವೃತ್ರನು ಆಕಳಿಸಿದ; ಆಗ ಇಂದ್ರನು ಸೂಕ್ಷ್ಮರೂಪ ತಾಳಿ ಹೊರಬಿದ್ದು, ದೂರ ಓಡಿ ಹೋದ. ಮುಂದೆ ವೃತ್ತನಿಗೂ ಇಂದ್ರನಿಗೂ ಸಂಧಾನವಾಯಿತು. ಆದರೆ ಇಂದ್ರನಿಗೆ ವೃತ್ರನ ಮೇಲಿದ್ದ ಕೋಪ ಹೋಗಲೇ ಇಲ್ಲ.




**11**




ಇಂದ್ರನ ಪ್ರಾರ್ಥನೆಯ ಫಲವಾಗಿ ವಿಷಪೂರಿತವಾದ ನೊರೆಯಂಥ ಒಂದು ವಸ್ತು ಸಮುದ್ರದಿಂದ ಮೇಲೆದ್ದು ಬಂತು. ಅದನ್ನು ಇಂದ್ರನು ತನ್ನ ವಜ್ರವೆಂಬ ಆಯುಧಕ್ಕೆ ಲೇಪಿಸಿ ಆ ರಾಕ್ಷಸನನ್ನು ಕೊಂದ.


**12**



**13** ಆ ಕಲ್ಲು ಇದ್ದ ಸ್ಥಳದಲ್ಲೇ ಪುಂಡಲೀಕನ ಆಶ್ರಮವಿತ್ತು. ಅಲ್ಲಿಗೆ ಬಂದ ಶ್ರೀಕೃಷ್ಣನು ಆ ಕಲ್ಲಿನ ಮೇಲೆ ಆಕಸ್ಮಿಕವಾಗಿ ನಿಂತ. ಶ್ರೀಕೃಷ್ಣನ ಸ್ಪರ್ಶದಿಂದ ಶಾಪವಿಮೋಚನೆಯಾಗಿ, ಇಂದ್ರನು ಮೇಲೆದ್ದು ನಿಂತ.




**14** ತನ್ನ ಹೆತ್ತವರ ಸೇವೆ ಮಾಡಿ ಮುಗಿಸಿದ ಪುಂಡಲೀಕನು ಶ್ರೀಕೃಷ್ಣನ ಬಳಿಗೆ ಬಂದು, ಅವನಿಗೆ ನಮಸ್ಕರಿಸಿ, ಅವನ ಕ್ಷಮೆ ಕೇಳಿದ.




ಪುಂಡಲೀಕನ ಹೆಸರಿನಿಂದಲೇ ಆ ಪ್ರದೇಶಕ್ಕೆ ಪುಂಡರೀಕಪುರ ಎಂದು ಹೆಸರಾಯಿತು. ಮುಂದೆ ಅದೇ ಪಂಡರಾಪುರ ಎಂದಾಯಿತು. ಶ್ರೀಕೃಷ್ಣನೇ ನಿಂತ ಶಿಲೆಯಾದ್ದರಿಂದ ಆ ಕಲ್ಲನ್ನು ಅವನು ವಿಠಲ ಎಂದು ಪೂಜಿಸಿದ, ವಿಠ್ ಎಂದರೆ ಕಲ್ಲು ಎಂದರ್ಥ.



ತಂದೆತಾಯಿಗಳೇನು ಕಸಕಡ್ಡಿಗಳೆ? ಅವರು ಸುಪ್ರೀತರಾದ ಹೊರತು ಸಾಧನೆಯ ಕರ್ಮಗಳಾವುವೂ ಫಲ ಬಿಡಲಾರವು. ಚೈತನ್ಯದೇವ ಯಾವಾಗ ನೋಡಿದರೂ ಪ್ರೇಮೋನ್ಮತ್ತನಾಗಿರುತ್ತಿದ್ದ. ಆದರೂ ಸಂನ್ಯಾಸ ತೆಗೆದುಕೊಳ್ಳುವ ಮುನ್ನ ಎಷ್ಟೊಂದು ದಿನ ಆತ ತನ್ನ ತಾಯಿಗೆ ಸಮಾಧಾನ ಹೇಳಬೇಕಾಯಿತು! ಆತ ಆಕೆಗೆ ಹೇಳಿದ: 'ಅಮ್ಮ, ವ್ಯಸನ ಪಡಬೇಡ, ಆಗಾಗ ಬಂದು ನೋಡಿ ಹೋಗುತ್ತೇನೆ.'

– ಶ್ರೀರಾಮಕೃಷ್ಣರು

